SERVICE ABOVE SELF

2025-26

Rotary

विश्वमित्रः

# ವಿಶ್ವಮಿತ್ರ

# VISHWAMITHRA

Weekly House Bulletin of Rotary Club Shimoga, R.I. Dist. 3182

UNITE FOR GOOD Rotary

Rtn. Francesco Arezzo
RI President 2025-26

| Rtn. K. Palaksha | Rtn. Anand R. | Rtn. Vishwas Y. | Rtn. M. Madhavachar |
|---|---|---|---|
| District Governor 2025-26 | President, Mob: 99800 93066 | Secretary, Mob : 99800 63180 | Bulletin Editor, Mob: 98862 73495 |

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 68 ಸಂಚಿಕೆ –43 ದಿನಾಂಕ : 06–05–2026

**ದಿನಾಂಕ: 06.05.2026 ಈ ಸಾಲಿನ ಮೇ ತಿಂಗಳ ಪ್ರಥಮ ವಾರದ ಸಭೆ. ಅಂದು ಮುಖ್ಯ ಅತಿಥಿಗಳಾಗಿ ಶಿವಮೊಗ್ಗ ಕ್ಷೇತ್ರದ ಜನಾನುರಾಗಿ ಮಾಜಿ ಶಾಸಕರಾದ ಶ್ರೀ ಕೆ.ಬಿ. ಪ್ರಸನ್ನ ಕುಮಾರ್‌ರವರು ಮುಖ್ಯ ಅತಿಥಿಗಳಾಗಿ ಆಗಮಿಸಿ "ರಾಜಕೀಯ ಅಂದು–ಇಂದು" ಎಂಬ ವಿಚಾರವಾಗಿ ಮಾತನಾಡಿದರು. ವೇದಿಕೆಯಲ್ಲಿ ಇವರೊಂದಿಗೆ ಅಧ್ಯಕ್ಷರಾದ ರೊ.ಆರ್. ಆನಂದ್ ಮತ್ತು ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿಯವರಿದ್ದರು. ಅಧ್ಯಕ್ಷರಿಗೆ ರೊ.ಎಸ್. ಮಂಜುನಾಥ್‌ರವರು ಕಾಲರ್ ತೊಡಿಸಿದರು.**













ಅಂದು ರೊ. ಸುಮಲತಾ ಭೂಪಾಳಂರವರಿಂದ "ನಾನು ಇರಲಿ ಇಲ್ಲದಿರಲಿ ನನ್ನ ಭಾರತ ಬೆಳಗುತಿರಲಿ" ಎಂಬ ದೇಶ ಭಕ್ತಿಯ ಸುಶ್ರಾವ್ಯ ಗೀತೆಯೊಂದಿಗೆ ಪ್ರಾರ್ಥನೆಯಾಯಿತು. ರೊ. ಶೈಲಿನ್ ಬಾಬುರವರು ಸರ್ವರನ್ನು ಸ್ವಾಗತಿಸಿದರು. ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿಯವರು ಹುಟ್ಟು ಹಬ್ಬದ ಶುಭಾಶಯ ಕೋರಿದರು.

ರೊ. ಎಂ. ಮಾಧವಾಚಾರ್‌ರವರು ಮುಖ್ಯ ಅತಿಥಿಗಳಾದ ರೊ. ಕೆ.ಬಿ. ಪ್ರಸನ್ನ ಕುಮಾರ್‌ರವರನ್ನು ಸಭೆಗೆ ಪರಿಚಯ ಮಾಡಿದರು. ಮಾಜಿ ಶಾಸಕರಾದ ಶ್ರೀಯುತ ಕೆ.ಬಿ. ಪ್ರಸನ್ನ ಕುಮಾರ್‌ರವರು ಶಿವಮೊಗ್ಗದ ಮಣ್ಣಿನ ಗುಣವನ್ನೇ ಮೈಗೂಡಿಸಿಕೊಂಡು, ಜನ ಸೇವೆಯನ್ನೇ ಪರಮ ಧರ್ಮವೆಂದು ನಂಬಿ ಮುನ್ನಡೆಯುತ್ತಿರುವ ಅಪರೂಪದ ರಾಜಕಾರಣಿಯಾಗಿದ್ದಾರೆ. ಇವರ ಸಾಧನೆ ಸ್ಫೂರ್ತಿದಾಯಕವಾಗಿದೆ. ಸಂಸ್ಕಾರವಂತ ತಂದೆ ತಾಯಿಯೊಂದಿಗೆ ಬೆಳೆದ ಇವರು, ಬಾಲ್ಯದಿಂದಲೇ ಸಮಾಜ ಮುಖಿ ಚಿಂತನೆ ಬೆಳೆಸಿಕೊಂಡವರು. ತಮ್ಮ ಪದವಿ ಪೂರೈಸಿದ ನಂತರ ವೃತ್ತಿಯಲ್ಲಿ ಪಿಡಬ್ಲ್ಯೂಡಿನಲ್ಲಿ ಪ್ರಥಮ ದರ್ಜೆ ಗುತ್ತಿಗೆದಾರರಾಗಿ ಗುರುತಿಸಿಕೊಂಡಿದ್ದಾರೆ. ಇವರ ಶಿಸ್ತುಬದ್ಧ ಜೀವನ ರಾಜಕೀಯ ಬದುಕಿಗೆ ಬಲವಾದ ಅಡಿಪಾಯ ಹಾಕಿಕೊಟ್ಟಿದೆ. ಕೇವಲ ರಾಜಕೀಯಕ್ಕೆ ಸೀಮಿತವಾಗದೆ ವಿವಿಧ ಕ್ಷೇತ್ರಗಳಲ್ಲಿ ತಮ್ಮನ್ನು ತಾವು ತೊಡಗಿಸಿ

## ಈ ವಾರದ ಸಭೆ

**ದಿನಾಂಕ: 13–5–2026, ಬುಧವಾರ** **ಸಂಜೆ 6:45 ರಿಂದ**

**ಅಂತರರಾಷ್ಟ್ರೀಯ ಕುಟುಂಬ ದಿನದ ಅಂಗವಾಗಿ**

**ಉಪನ್ಯಾಸ ಮತ್ತು ಸಂವಾದ :**

ವಿಷಯ: **'ಮನೆ ಎಂಬ ತಾಣದ ಸುತ್ತ–ಮುತ್ತ'**

ಅತಿಥಿ: **ಡಾ. ಕೆ.ಎಸ್. ಪವಿತ್ರ**

ಮನೋವೈದ್ಯರು, ಶಿವಮೊಗ್ಗ

ದಯವಿಟ್ಟು ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ

ಸ್ಥಳ: **ರೋಟರಿ ಯುವ ಕೇಂದ್ರ**, ಸವಳಂಗ ರಸ್ತೆ, ಶಿವಮೊಗ್ಗ






ಕೊಂಡಿದ್ದಾರೆ. ಸಹಕಾರಿ ಕ್ಷೇತ್ರ, ಸಮುದಾಯ ಸೇವೆ, ಸಾಂಸ್ಕೃತಿಕ ಕ್ಷೇತ್ರಕ್ಕೆ ಅವರು ನೀಡಿರುವ ಕೊಡುಗೆಗಳಿಂದ, ಸಂಕಷ್ಟದ ಸಮಯದ ಸಾರಥಿಯಾಗಿ ಹೊರಹೊಮ್ಮಿದ್ದಾರೆ. ಜನಸಾಮಾನ್ಯರ ಧ್ವನಿಯಾಗಿ ಹೊರಹೊಮ್ಮಿದ ಶ್ರೀಯುತರು, ನಗರ ಸಭೆಯ ಅಧ್ಯಕ್ಷರಾಗಿ, ಶಿವಮೊಗ್ಗೆಯ ಶಾಸಕರಾಗಿ, ತಮ್ಮ ಉತ್ತಮ ಸೇವೆ ಸಲ್ಲಿಸಿದ್ದಾರೆ. ಪ್ರಸ್ತುತ ಜೆ.ಡಿ.ಎಸ್ ಪಕ್ಷದ ರಾಜ್ಯ ಉಪಾಧ್ಯಕ್ಷರಾಗಿ "ಪದವಿಗಿಂತ ಸೇವೆಯೇ ದೊಡ್ಡದು" ಎಂಬ ತತ್ವದಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಮುಖ್ಯ ಅತಿಥಿಗಳಾದ ಶ್ರೀ ಕೆ.ಬಿ. ಪ್ರಸನ್ನ ಕುಮಾರ್‌ರವರು ತಮ್ಮ ಮಾತನ್ನು ಆರಂಭಿಸುವ ಮೊದಲು, ತಮ್ಮನ್ನು ಇಂದು ಈ ಸಭೆಯಲ್ಲಿ ಮಾತನಾಡಲು ಕರೆಸಿದ್ದಕ್ಕೆ ಸರ್ವರಿಗೂ ವಂದನೆಗಳನ್ನು ತಿಳಿಸಿದರು. ಇಲ್ಲಿ ಹಿರಿಯರಿದ್ದಾರೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ತಮ್ಮನ್ನು ತೊಡಿಗಿಸಿಕೊಂಡು, ಅದನ್ನು ತಮ್ಮ ಜೀವನದಲ್ಲಿ ಹಾಸು ಹೊಕ್ಕಾಗಿಸಿಕೊಂಡು, ಆಗು ಹೋಗುಗಳಿಗೆ ಕಾರಣಗಳನ್ನು ಹುಡುಕುತ್ತಾ, ಶಿವಮೊಗ್ಗೆಯ ರಾಜಕಾರಣದಲ್ಲಿ ಉತ್ತಮ ನಾಯಕ ನಾಯಕಿಯರು ಗಳನ್ನು ಹೊಂದಿರುತ್ತಾರೆ, ಒಟ್ಟಾರೆ ಈ ಒಂದು ವ್ಯವಸ್ಥೆಯಲ್ಲಿ ನಾವೆಲ್ಲರೂ ಇದ್ದೇವೆ. ರಾಜಕಾರಣವೆಂದರೇನೇ ಚುನಾವಣಾ ವ್ಯವಸ್ಥೆ. ಚುನಾವಣೆಯಲ್ಲಿ ನಮ್ಮ ನೆಚ್ಚಿನ ನಾಯಕ ನಾಯಕಿಯರನ್ನು ಆಯ್ಕೆ ಮಾಡುವ ಅವಕಾಶ ನಮಗೊದಗಿ ಬರುತ್ತದೆ. ಇದು ನಿರಂತರವಾಗಿದ್ದು ಇಲ್ಲಿನ ನೆಲದ ರಾಜಕಾರಣದಲ್ಲಿ ಹಾಸುಹೊಕ್ಕಾಗಿದೆ.

ಹಿಂದಿನ ದಿನಗಳಲ್ಲಿ ಚುನಾವಣೆಗೆ ಹೆಚ್ಚಿನ ಖರ್ಚು ವೆಚ್ಚಗಳು ಕಾಣುತ್ತಿರಲಿಲ್ಲ. ಕರಪತ್ರ, ನಗರದ ಪ್ರಮುಖ ಭಾಗಗಳಲ್ಲಿ ಬ್ಯಾನರ್‌ಗಳು, ಮುಂತಾದ ರೀತಿಯಲ್ಲಿ ಪ್ರಚಾರ ಮಾಡುತ್ತಿದ್ದರು. ಕಾರ್ಯಕರ್ತರು ಮತದಾರರ ಮನೆ ಬಾಗಿಲಿಗೆ ಹೋಗಿ ಮತದಾನ ಮಾಡಲು ಹಾಗೂ ತಮ್ಮ ಪಕ್ಷಕ್ಕೆ ಮತ ಹಾಕುವಂತೆ ಜನಗಳನ್ನು ಉತ್ತೇಜಿಸುತ್ತಿದ್ದರು. ಇದರಿಂದ ಶೇ90% ಮತದಾನ ಪ್ರಕ್ರಿಯೆಗಳು ಮುಗಿಯುತ್ತಿತ್ತು. ಹಿನ್ನೆಲೆಯಲ್ಲಿ ಪ್ಯಾಕೆಟ್‌ಗಳು ಸರಬರಾಜಾಗುತ್ತಿತ್ತೆನ್ನಿ. ಅಂದು ಒಂದು ಪಕ್ಷದ ಹಿರಿಯ ನಾಯಕರುಗಳು ಅಭ್ಯರ್ಥಿಯ ಹಾಗೂ ಪಕ್ಷದ ಪರವಾಗಿ ಮಾತನಾಡಲು ಆಗಮಿಸುತ್ತಿದ್ದರು. ಅವರು ಸಂಜೆ 6 ಕ್ಕೆ ಬರುತ್ತಾರೆ ಎಂದು ಪ್ರಕಟಣೆಗೊಂಡರೆ, ಅವರುಗಳು ರಾತ್ರೆ 10 ಕ್ಕೆ ಬರುತ್ತಿದ್ದರು. ವಿಪರ್ಯಾಸ ಎಂದರೆ, ರಾತ್ರೆ 10 ರವರೆವಿಗೂ ಜನ ಕಾಯುತ್ತಿದ್ದರು. ನಾಯಕ ಬರುತ್ತಾರೆ ಎಂದರೆ ಆ ಪಕ್ಷದವರೇ ಇರುತ್ತಾರೆ ಎಂದಿಲ್ಲ. ಅಂದರೆ ವಿರೋಧ ಪಕ್ಷದವರೂ ಸೇರುತ್ತಿದ್ದರು. ಉದಾಹರಣೆಗೆ ಇಂದಿರಾಗಾಂಧಿ, ಜಗನ್ನಾಥರಾವ್ ಜೋಷಿ, ರಾಮಕೃಷ್ಣ ಹೆಗಡೆ ಮುಂತಾದ ನಾಯಕರ ಭಾಷಣಕ್ಕೆ ಬರುತ್ತಾರೆ ಎಂದರೆ ಬಹಳ ಆಸಕ್ತಿಯಿಂದ ಕಾದು ಭಾಷಣ ಕೇಳುತ್ತಿದ್ದರು.

ಆದರೆ ಇವತ್ತಿನ ಚುನಾವಣೆಗೆ ಹಣ ಸಾಕಾಗುತ್ತಿಲ್ಲ. ಎಷ್ಟು ಹಣ ಒದಗಿಸಿದರೂ ಪೂರೈಸಲು ಕಷ್ಟ ಸಾಧ್ಯವಾಗಿದೆ. ಕಾರ್ಯಕರ್ತರು ಮನೆ ಮನೆಗೆ ತೆರಳಿ, ಉಡುಗೊರೆ ಕೊಡುವುದು, (ಗಿಫ್ಟ್) ಸಂಘ ಸಂಸ್ಥೆಗಳಿಗೂ ಸಹ ಈ ಕಾರಣಕ್ಕಾಗಿ ಹಣ ಒದಗಿಸಬೇಕಾಗಿದೆ. ಖರ್ಚಿನ ಬಾಬ್ತು ಹೆಚ್ಚಾಗುತ್ತಲೇ ಇದೆ. ಈ ಹಿಂದೆ ಕಾರ್ಯಕರ್ತರಿಗೆ ಊಟ ತಿಂಡಿ ಬಾಬ್ತು ಪೂರೈಸಿದರೆ, ಶೇ 90% ರಷ್ಟುಚುನಾವಣೆ ಮುಗಿಯುತ್ತಿತ್ತು. ಇಂದು ಪಕ್ಷದ ನಾಯಕರು ಬರುತ್ತಾರೆ ಎಂದರೂ ಜನರನ್ನು ಕರೆದುಕೊಂಡು ಬರಬೇಕು. ಇಂದಿಗೂ ಮತ್ತು ಅಂದಿಗೂ ಚುನಾವಣಾ ವ್ಯವಸ್ಥೆಯಲ್ಲಿ ತದ್ವಿರುದ್ಧವಾದ ವಾತಾವರಣವಿದೆ. ಚುನಾವಣಾ ವೆಚ್ಚ ಮತ್ತು ಪ್ರಚಾರ ಕಾರ್ಯದ ವೆಚ್ಚ ಹೆಚ್ಚುತ್ತಲೇ ಸಾಗಿದೆ. ಜನರನ್ನು ಹಿಡಿದಿಟ್ಟುಕೊಳ್ಳುವುದೇ ಒಂದು ಕೆಲಸವಾಗಿದೆ. ಇಂದಿನ ನಾಯಕರುಗಳ ಮಾತನ್ನು ಕೇಳಲು ಇಂದಿನವರಿಗೆ ಇಷ್ಟವಿಲ್ಲ.

ಈಗ ನೈತಿಕತೆ ಮತ್ತು ಆದರ್ಶ ಬಹಳ ಕಡಿಮೆಯಾಗುತ್ತಿದೆ. ಹಿಂದಿನ ದಿನಗಳಲ್ಲಿ ಭಾರತದ ಲಾಲ್ ಬಹದ್ದೂರ್ ಶಾಸ್ತ್ರಿ ರೈಲ್ವೇ ಮಂತ್ರಿಗಳಾಗಿದ್ದರು. ಅಂದು ಭಾರತದಲ್ಲಿ ಎರಡು ಕಡೆಗಳಲ್ಲಿ ರೈಲು ಅಪಘಾತವಾಯಿತು. ಅದರ ಹೊಣೆಹೊತ್ತು ಶ್ರೀಲಾಲ್ ಬಹದ್ದೂರ್ ಶಾಸ್ತ್ರಿಗಳು ತಮ್ಮ ಸ್ಥಾನಕ್ಕೆ ರಾಜಿನಾಮೆ ನೀಡಿದ್ದರು. ಇದು ಅಂದಿನವರ ಆದರ್ಶ ಮತ್ತು ಬದ್ಧತೆ. ಅಂದಿನ ದಿನಗಳಲ್ಲಿ ತಮ್ಮ ಗೌರವಕ್ಕೆ ಸಣ್ಣಚ್ಯುತಿ ಬಂದರೂ ನ್ಯಾಯಾಲಯದ ಮೆಟ್ಟಿಲೇರುತ್ತಿದ್ದರು. ಇಂದು ಸಾಕ್ಷೀ ಸಮೇತ ಸಿಕ್ಕಿಹಾಕಿಕೊಂಡರೂ ಕೂಡ ತಮ್ಮ ಅಧಿಕಾರದಲ್ಲಿ ಮುಂದುವರೆವವರಿದ್ದಾರೆ ಎಂದರು. ನಮ್ಮ ರಾಜ್ಯದಲ್ಲಿ ಟೆಲಿಫೋನ್ ಕದ್ದಾಲಿಕೆ ಪ್ರಕರಣದಲ್ಲಿ ಶ್ರೀ ರಾಮಕೃಷ್ಣ ಹೆಗಡೆಯವರ ಹೆಸರು ಕೇಳಿ ಬಂದಾಗ ಅವರು ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದರು. ಆದರೂ ಕೂಡ ಅವರು ತಮ್ಮ ಸ್ಥಾನಕ್ಕೆ ರಾಜಿನಾಮೆ ನೀಡಿದ್ದರು. ಈಗ ದಾಖಲೆಗಳ ಸಮೇತ ಸಿಕ್ಕಿ ಬಿದ್ದರೂ ಕೂಡ ಹೈಕೋರ್ಟ್ ಮೊರೆಹೋಗಿ ತನಿಖೆ ಮಾಡಬಾರದೆಂದು ಸ್ಟೇ ತರುತ್ತಾರೆ. ತಮ್ಮ ಅಪರಾಧವನ್ನು ಯಾರೂ ತನಿಖೆ ಮಾಡಬಾರದೆಂದು ತಿಳಿಸಿ, ಅಧಿಕಾರದಲ್ಲಿ ಮುಂದುವರೆಯುತ್ತಾರೆ ಎಂದರು.

ಹಿಂದೆ ಜನ ಒಂದೇ ಪಕ್ಷವನ್ನು ಹೆಚ್ಚಾಗಿ ಆಯ್ಕೆ ಮಾಡುತ್ತಿದ್ದರು. ಪ್ರಣಾಳಿಕೆ ನೋಡಿರುತ್ತಿದ್ದರು. ಹಾಗೆಯೇ ನೈಜವಾದ ಪ್ರಣಾಳಿಕೆ ನೀಡುವುದು, ಪ್ರಾಮಾಣಿಕ ರಾಜಕಾರಣಿಗಳಿಂದ ಸಾಧ್ಯ. ಇತ್ತೀಚಿನ ದಿನಗಳಲ್ಲಿ ಒಂದೇ ಪಕ್ಷವನ್ನು ಆಯ್ಕೆ ಮಾಡಲು ಜನರಿಗೆ ಸಾಧ್ಯವಾಗುತ್ತಿಲ್ಲ. ಮತ್ತೆರಡು ಪಕ್ಷಗಳು ಬೇಕು. ಅವುಗಳ ಸಹಾಯ ಬೇಕು. ಇದರಿಂದ ಭ್ರಷ್ಟಾಚಾರ ಹಬ್ಬಲು ಕಾರಣವಾಗುತ್ತದೆ. ಕೊನೆಗೆ ಪ್ರಣಾಳಿಕೆಗಳು ಕಸದ ಬುಟ್ಟಿ ಸೇರುತ್ತವೆ. ಜೊತೆಗೆ ವಿಭಿನ್ನ ಸಿದ್ಧಾಂತ ಹೊಂದಿರುವ ಪಕ್ಷಗಳ ಜೊತೆ ಮೈತ್ರಿ ಮುಂದುವರೆಯಲು ಸಹ ಕಷ್ಟವಾಗುತ್ತದೆ ಎಂದರು.

ಶ್ರೀ ಪ್ರಸನ್ನ ಕುಮಾರ್‌ರವರು ಮುಂದುವರೆದು, ಈ ಹಿಂದೆ ಜನಪ್ರತಿನಿಧಿಗಳು ಅಷ್ಟೊಂದು ವಿದ್ಯಾವಂತರಾಗಿರಲಿಲ್ಲ. ಆದರೂ ಅವರ ಆದರ್ಶ, ನಂಬಿಕೆಯಂತೆ ಜನರ ಅಭಿಲಾಷೆಯನ್ನು ಈಡೇರಿಸಲು ಒತ್ತನ್ನು ಕೊಡುತ್ತಿದ್ದರು. ಈ ಹಿಂದೆ ಶ್ರೀ ಕೆ. ಪುಟ್ಟಪ್ಪ ಎನ್ನುವವರು ಶಿವಮೊಗ್ಗ ನಗರ ಸಭೆಯಲ್ಲಿ ಅಧ್ಯಕ್ಷರಾಗಿದ್ದರು. ಅವರು ಅಷ್ಟೊಂದು ವಿದ್ಯಾವಂತರಿರಲಿಲ್ಲವಾದರೂ ಅವರು ಮಾಡಿದ ಕೆಲಸಗಳು ಇಂದಿಗೂ

ಅನುಕರಣೀಯ ಮತ್ತು ಹಲವಾರು ಸಮಸ್ಯೆಗಳಿಗೆ ಉತ್ತರವನ್ನು ನೀಡುತ್ತವೆ ಎಂದರು. ಇಂದು ಒಬ್ಬ ಅಧಿಕಾರಿ ಒಂದು ಕೆಲಸ ಮಾಡಲಾಗುವುದಿಲ್ಲವೆಂದರೆ ಆ ಕೆಲಸ ಆಗುವುದಿಲ್ಲ. ಆ ಮಟ್ಟಿಗೆ ರಾಜಕಾರಣಿಗಳು ಅವರ ಮೇಲೆ ಅವಲಂಬಿತರಾಗಿರುತ್ತಾರೆ. ಇಂದು ರಾಜಕಾರಣದಲ್ಲಿ ವಿದ್ಯಾವಂತರ ಅವಶ್ಯಕತೆ ತುಂಬಾ ಇದೆ. ಅವರುಗಳಿಲ್ಲದಿದ್ದರೆ ಮುಂದಿನ ರಾಜಕಾರಣವಿಲ್ಲವೆನ್ನುವಂತಾಗಿದೆ. ಜಗದ ನಿಯಮ ಬದಲಾಗಿದೆ. ಅದರಂತೆ ನಡೆಯಬೇಕಾಗಿದೆ.

ಮಾಜಿ ಪ್ರಧಾನಮಂತ್ರಿ ಪಿ.ವಿ. ನರಸಿಂಹರಾಯರ ಕಾಲದಲ್ಲಿ ಆದ ಗ್ಯಾಟ್ ಒಪ್ಪಂದದಿಂದ ಎಲ್ಲಾ ದೇಶಗಳ ಪದಾರ್ಥಗಳು ಭಾರತಕ್ಕೆ ಬಂದವು. ಇಲ್ಲಿನ ಪದಾರ್ಥಗಳು ಬೇರೆ ದೇಶಕ್ಕೆ ಹೋದವು. ವಾಹನಗಳಿಗೆ ಉಪಯೋಗಿಸುವ ವಸ್ತುಗಳು ಬಂದವು. ಹಣಕಾಸು ಹರಿವು ಹೆಚ್ಚಾಯಿತು. ಖರೀದಿ ಜಾಸ್ತಿಯಾಯಿತು. ಹಾಗೆಯೇ ಭೂಮಿಯ ಖರೀದಿಯೂ ಜಾಸ್ತಿಯಾಯಿತು. ಭಾರತದ ಎಲ್ಲಾ ಕ್ಷೇತ್ರಗಳಲ್ಲೂ ಬದಲಾವಣೆ ಆಯಿತು. ಇದಲ್ಲದೇ ಬಂದ ಸಮ್ಮಿಶ್ರ ಸರ್ಕಾರಗಳು ಏನೇನು ಪರಿಸ್ಥಿತಿಗಳು ತಂದವು ಎನ್ನುವುದು ಎಲ್ಲರಿಗೂ ಗೊತ್ತಿದೆ. 2ಜಿ 4ಜಿ ಬಂದವು. ಚುನಾವಣೆ ವ್ಯವಸ್ಥೆಗಳು ಬದಲಾದವು. ಲೋಕಸಭೆಯ ಲೌಂಜ್‌ಗಳಲ್ಲಿ ಆಡಿದ ಮಾತುಗಳೆಂದರೆ ಲೋಕಸಭೆ ಚುನಾವಣೆಗೆ 50 ಕೋಟಿ ಖರ್ಚು, ವಿಧಾನ ಸಭೆ ಚುನಾವಣೆಗೆ 5 ಕೋಟಿ ಖರ್ಚಾಗಿದೆ ಎಂಬುದೇ ಆಗಿದೆ. ಅವುಗಳನ್ನು ವಸೂಲಿ ಮಾಡಬೇಕಲ್ಲವೇ? ಯಾರ ಮೇಲೆ ಹಾಕಬೇಕು? ಕೆಲವೆಡೆ ಚುನಾವಣೆಗೆ ದುಡ್ಡು ಬೇಡ. ಆದರೆ ಕೆಲವೆಡೆ ಅಧಿಕವಾಗಿ ಬೇಕಾಗಿದೆ. ಇಂದಿನ ದಿನಮಾನದಲ್ಲಿ ಚುನಾವಣಾ ವ್ಯವಸ್ಥೆಯಲ್ಲಿ ಬಹಳಷ್ಟು ಬದಲಾವಣೆಯಾಗಿದೆ ಎಂದರು.

ರೊ. ಎಂ. ಮಾಧವಾಚಾರ್ ಮಾತನಾಡಿ, ಗ್ಯಾರಂಟಿಗಳಿಲ್ಲದೇ ಚುನಾವಣೆ ಇಲ್ಲ ಎಂಬತ್ತಾಗಿದೆ. ಇದಕ್ಕೆ ನಿಮ್ಮ ಅಭಿಪ್ರಾಯವೇನು? ಎಂದು ಪ್ರಶ್ನಿಸಿದ್ದಕ್ಕೆ ಉತ್ತರಿಸಿದ ಶ್ರೀ ಪ್ರಸನ್ನ ಕುಮಾರ್, ಪ್ರಣಾಳಿಕೆಯಲ್ಲಿನ ಆಶ್ವಾಸನೆಗಳು, ಅಭ್ಯರ್ಥಿ ಗೆಲ್ಲುವಿಕೆ, ಏನಾದರೂ ಮಾಡಿ ಗೆಲ್ಲು ಎನ್ನುವುದೇ ಚುನಾವಣಾ ಪ್ರಕ್ರಿಯೆ ಆಗಿದೆ. ಹಾಗಂತ ಗ್ಯಾರಂಟಿ ಇಲ್ಲದೇ ಚುನಾವಣೆ ಇಲ್ಲ. ಗ್ಯಾರಂಟಿ ನಂಬಿಕೊಂಡು ಚುನಾವಣಾ ಹೋರಾಟ ಮಾಡಬೇಕಾಗಿದೆ ಎಂದರು.

ರೊ. ಸೆಂಥಿಲ್ ವೇಲನ್‌ರವರು ಮಾತನಾಡಿ, ತಮಿಳುನಾಡಿನಲ್ಲಿ ಆಗಿರುವ ಬೆಳವಣಿಗೆ ಬಗ್ಗೆ ಮಾತನಾಡಿದರು. ಉತ್ತರಿಸಿದ ಮುಖ್ಯ ಅತಿಥಿಗಳು, ಈಗಿನ ಬೆಳವಣಿಗೆ ನೋಡಿದರೆ ಜನರ ಚಿಂತನೆಯೇ ಆ ರೀತಿ ಆಗಿದೆ ಎನ್ನಿಸುತ್ತದೆ. ಆದರೆ ಗೆದ್ದು ಬಂದ ಮೇಲೆ ನಾಯಕರುಗಳು ಅದನ್ನು ಪೂರೈಸಲು ಚಿಂತನೆ ಮಾಡಿ ಹಾಗೂ ಹರಸಾಹಸ ಪಡಬೇಕಾಗಿದೆ ಎಂದರು.

ತಮ್ಮ ಅಧ್ಯಕ್ಷೀಯ ಭಾಷಣವನ್ನು ಮಾಡಿದ ರೊ. ಆರ್. ಆನಂದರವರು, ಈ ಎಲ್ಲಾ ಪ್ರಕ್ರಿಯೆಗಳಲ್ಲಿ ನಾವುಗಳೂ ಭಾಗಿಗಳು. ನಾವೇನಾದರೂ ಇದರ ವಿರೋಧವಾಗಿ ಮಾತನಾಡಿದರೆ ಆಕಾಶಕ್ಕೆ ಉಗಿದಂತಾಗುತ್ತದೆ. ಕೇವಲ 10% ನೈತಿಕತೆ ಇನ್ನು 90% ವ್ಯಾಪಾರದ ದೃಷ್ಟಿಯಾಗಿ, ಲಾಭ ನಷ್ಟದ ದೃಷ್ಟಿಯಾದ ಚುನಾವಣೆ ಎಂದರು. ಈ ಸಭೆಯಲ್ಲಿ ಹಿಂದಿನ ಹಾಗೂ ಈಗಿನ ರಾಜಕಾರಣಗಳ ಬಗ್ಗೆ ಶ್ರೀ ಕೆ.ಬಿ. ಪ್ರಸನ್ನ ಕುಮಾರ್‌ರವರು ಚೆನ್ನಾಗಿ ಮಾತನಾಡಿದ್ದಾರೆ ಎಂದು ತಿಳಿಸಿ, ಅವರಿಗೆ ನೆನಪಿನ ಕಾಣಿಕೆ ನೀಡಿ ಗೌರವಿಸಿದರು. ಕೊನೆಯಲ್ಲಿ ಕಾರ್ಯದರ್ಶಿ ರೊ. ವಿಶ್ವಾಸ್ ಎಲಬುರ್ಗಿಯವರು ವಂದನಾರ್ಪಣೆ ಮಾಡಿದರು.

## ಮಲಬದ್ಧತೆಗೆ ಮನೆಮದ್ದುಗಳು

**ರೊ. ಡಾ. ಕಾಂಚನ್ ಕುಲಕರ್ಣಿ,** ಬಿ.ಎ.ಎಂ.ಎಸ್. ಎಂ.ಡಿ. ಪಿಜಿಡಿಸಿಸಿಟಿ
**ಪಂಚಮಿ ಆಯುರ್ವೇದ ಚಿಕಿತ್ಸಾ ಕೇಂದ್ರ, ಕುವೆಂಪು ರಸ್ತೆ, ಶಿವಮೊಗ್ಗ**

- **ಬಿಸಿ ನೀರು** : ಬೆಳಗ್ಗೆ ಎದ್ದ ತಕ್ಷಣ ಒಂದು ಗ್ಲಾಸ್ ಬಿಸಿ ನೀರು ಕುಡಿಯುವುದು ಜೀರ್ಣಕ್ರಿಯೆ ಸುಧಾರಿಸುತ್ತದೆ.
- **ತ್ರಿಫಲಾ ಚೂರ್ಣ** : ರಾತ್ರಿ ಮಲಗುವ ಮುನ್ನ ಅರ್ಧ ಚಮಚ ತ್ರಿಫಲಾ ಚೂರ್ಣವನ್ನು ಬಿಸಿ ನೀರಿನಲ್ಲಿ ತೆಗೆದುಕೊಳ್ಳಿ.
- **ತುಪ್ಪ** : ಊಟದಲ್ಲಿ ಸ್ವಲ್ಪ ತುಪ್ಪ ಸೇರಿಸಿ, ಇದು ಅಂತರಾಳವನ್ನು ಸ್ಮೂತ್ ಮಾಡುತ್ತದೆ.
- **ಬಾಳೆಹಣ್ಣು** : ದಿನಕ್ಕೆ ಒಂದು ಅಥವಾ ಎರಡು ಬಾಳೆಹಣ್ಣು ತಿನ್ನುವುದು ಉತ್ತಮ
- **ಇಸಬ್‌ಗೋಲ್**: ರಾತ್ರಿ ಒಂದು ಚಮಚ ಇಸಬ್‌ಗೋಲ್ ಬೀಜವನ್ನು ಬಿಸಿ ಹಾಲು ಅಥವಾ ನೀರಿನಲ್ಲಿ ಬೆರೆಸಿ ಕುಡಿಯಿರಿ.
- **ಫೈಬರ್ ಆಹಾರ ಹೆಚ್ಚಿಸಿ** : ತರಕಾರಿ, ಹಣ್ಣುಗಳು, ಸಂಪೂರ್ಣ ಧಾನ್ಯಗಳು ಹೆಚ್ಚು ಸೇವಿಸಿ. ವಿಶೇಷವಾಗಿ ಸೌತೆಕಾಯಿ, ಕ್ಯಾರೆಟ್, ಬೀಟ್‌ರೂಟ್ ಉತ್ತಮ.
- **ನಿಂಬೆ ಹಣ್ಣು**: ನಿಂಬೆ ಹಣ್ಣಿನ ರಸವನ್ನು ಬಿಸಿ ನೀರಿನಲ್ಲಿ ಸೇರಿಸಿ ಕುಡಿಯಿರಿ.
- **ನಿಯಮಿತ ವ್ಯಾಯಾಮ** : ದಿನಕ್ಕೆ 20 ರಿಂದ 30 ನಿಮಿಷ ನಡೆಯುವುದು ಅಥವಾ ಯೋಗ ಮಾಡುವುದು ಅಗತ್ಯ.
- **ನೀರು** : ಹೆಚ್ಚು ನೀರು ಕುಡಿಯಿರಿ. ದಿನಕ್ಕೆ 2-3 ಲೀಟರ್ ನೀರು ಕುಡಿಯಿರಿ.

**ಮಲಬದ್ಧತೆಗೆ ಯೋಗಾಸನಗಳು:**

- **ಪವನಮುಕ್ತಾಸನ** : ಹೊಟ್ಟೆಯ ಗ್ಯಾಸನ್ನು ಹೊರಹಾಕಲು ಸಹಾಯಕ
- **ಪಶ್ಚಿಮೋತ್ತಾನಾಸನ** : ಅಂತರಾಳದ ಚಲನೆ ಹೆಚ್ಚಿಸುತ್ತದೆ.
- **ಭುಜಂಗಾಸನ** : ಜೀರ್ಣಕ್ರಿಯೆ ಸುಧಾರಿಸುತ್ತದೆ.
- **ಮಲಾಸನ** : ಮಲಬದ್ಧತೆ ನಿವಾರಣೆಗೆ ಅತ್ಯುತ್ತಮ
- **ವಜ್ರಾಸನ** : ಊಟದ ನಂತರ 5-10 ನಿಮಿಷ ವಜ್ರಾಸನದಲ್ಲಿ ಕುಳಿತುಕೊಳ್ಳಿ

**ಗಮನಿಸಿ:**

ತುಂಬಾ ಹೆಚ್ಚು ದಿನ ಮಲಬದ್ಧತೆ ಇದ್ದರೆ ವೈದ್ಯರನ್ನು ಸಂಪರ್ಕಿಸಿ. ಜಂಕ್‌ಫುಡ್, ಎಣ್ಣೆಯ ಪದಾರ್ಥಗಳನ್ನು ಕಡಿಮೆ ಮಾಡಿ.

## THE OBJECT OF ROTARY

The Object of Rotary is to encourage and foster the ideals of service as a basis of worthy enterprise and in particular, to encourage and foster:

**01 FIRST**
The development of acquaintance as an opportunity for service;

**02 SECOND**
High ethical standards in business and professions; the recognition of the worthiness of all useful occupations; and the dignifying of each Rotarian's occupation as an opportunity to serve society;

**03 THIRD**
The application of the ideal of service in each Rotarian's personal, business/professional, and community life;

**04 FOURTH**
The advancement of international understanding, goodwill, and peace through a world fellowship of business and professional persons united in the ideal of service.



ಸಂಪಾದಕೀಯ

## ನಿಮ್ಮ ತಂದೆ ಕರೀತಿದ್ದಾರೆ ಬನ್ನಿ...!

"ನಿಮ್ಮ ತಂದೆ ಕರೀತಿದ್ದಾರೆ ಬನ್ನಿ..." ನರ್ಸ್ ಹೇಳಿದ ಆ ಮಾತು ಕೇಳಿ ಗೊಂದಲಕ್ಕೀಡಾದವನು ಆಸ್ಪತ್ರೆಯ ಕಾರಿಡಾರ್‌ನಲ್ಲಿ ಕುಳಿತಿದ್ದ ಯುವಕ. ನಾನು ಕರೆದ ತಕ್ಷಣ ಆತ ಎದ್ದು ಬರುತ್ತಾನೆ ಅನ್ನೋ ಗ್ಯಾರಂಟಿಯಲ್ಲಿದ್ದವಳಂತೆ ಆಕೆ ತನ್ನ ಪಾಡಿಗೆ ತಾನು ಒಳಗೆ ಹೋಗಿಬಿಟ್ಟಳು. ಇವನೂ ಹಿಂಬಾಲಿಸಿದ. ಐಸಿಯುನ ಮಂಚವೊಂದರ ಬಳಿ ಹೋದ ನರ್ಸು ಅಲ್ಲಿ ಕಣ್ಣುಮುಚ್ಚಿಕೊಂಡು ಮಲಗಿದ್ದ ವೃದ್ಧನ ಕಿವಿಯಲ್ಲಿ 'ನಿಮ್ಮ ಮಗ ಬಂದಿದಾನೆ...' ಅಂತ ಹೇಳಿದಳು. ವೃದ್ಧನ ಮುಖದ ಕವಳಿಕೆಗಳು ಬದಲಾದವು. ಬೆರಳು ಅಲುಗಾಡಿದವು. ಇವನು ಹೋಗಿ ಪಕ್ಕದಲ್ಲಿ ಕುಳಿತು ಕೈ ಹಿಡಿದುಕೊಂಡ. ವೃದ್ಧನ ಹಿಡಿತ ಬಿಗಿಯಾಯಿತು. ಸಂಕಟವೆಲ್ಲ ಕರಗಿ ಹೋಯಿತೇನೋ ಎಂಬಂತೆ ಮುಖದ ಮೇಲೊಂದು ಮಂದಹಾಸ, ಏನೇನೋ ಕನವರಿಕೆ. ಆತ ಹೇಳುತ್ತಿದ್ದದ್ದು ಅರ್ಥವಾಗುತ್ತಿರಲಿಲ್ಲವಾದರೂ ಇವನು ಆಗಾಗ ಹಾ, ಹೂಂ ಅನ್ನುತ್ತಿದ್ದ. ಇನ್ನೊಂದು ಕೈಯಿಂದ ತೋಳು ಸವರಿದ. ಜೊಲ್ಲು ಒರೆಸಿದ. ನಿಧಾನವಾಗಿ ವೃದ್ಧನ ಮಾತು ಅಸ್ಪಷ್ಟವಾದವು. ಕೈಯ ಹಿಡಿತ ಒಮ್ಮೆ ಬಿಗಿಯಾಗಿ ಏಕಾಏಕಿ ಸಡಿಲವಾಯಿತು. ನಿಧಾನವಾಗಿ ಕಣ್ಣು ಮುಚ್ಚಿಕೊಂಡ. ಮುಖದ ಮೇಲಿನ ಮುಗುಳ್ನಗೆ ಹಾಗೇ ಇತ್ತು. ಯುವಕ ನರ್ಸನ್ನು ಕರೆದ. ಆಕೆ ಬಂದು ನಾಡಿ ನೋಡಿದಳು. ಹೃದಯದ ಮೇಲೆ ಸ್ಟೆತಸ್ಕೋಪ್ ಇಟ್ಟು ಕೇಳಿದಳು. ವೃದ್ಧನ ಎದೆಯ ಮೇಲೆ ಎರಡೂ ಕೈ ಇಟ್ಟು ಒತ್ತಿದಳು. ಸ್ವಲ್ಪ ಹೊತ್ತಿನ ನಂತರ ನಿರಾಶ ಭಾವದಲ್ಲಿ "ಸಾರಿ, ನಾವು ತುಂಬ ಪ್ರಯತ್ನ ಮಾಡಿದೆವು. ಶುಗರ್ ಕಡಿಮೆಯಾಗಿದ್ದರೆ ಏನಾದರೂ ಮಾಡಬಹುದಿತ್ತು, ವಯಸ್ಸು ಬೇರೆ ತುಂಬ ಆಗಿತ್ತು ನೋಡಿ" ಅಂತ ಏನೇನೋ ಹೇಳುತ್ತಿದ್ದಳು ಆಕೆ. ನರ್ಸ್ ಮಾತನ್ನ ಅರ್ಧದಲ್ಲೇ ತಡೆದ ಯುವಕ ಕೇಳಿದ,

"ಅದ್ಸರಿ, ಇವರು ಯಾರು?"

ಗಾಬರಿಯಾದಳು ಆಕೆ, "ನಿಮ್ಮ ತಂದೆ....ಅಲ್ಲವಾ!?"

"ಅಲ್ಲ, ಇಲ್ಲ ಅಡ್ಮಿಟ್ ಆಗಿರುವವರು ನನ್ನ ತಾಯಿ. ಆಕೆ ಪಕ್ಕದ ವಾರ್ಡ್‌ನಲ್ಲಿ ಹುಷಾರಾಗಿದ್ದಾಳೆ. ನೀವು ಕರೆದಿರಿ ಅಂತ ಬಂದೆ ಅಷ್ಟೇ ನಾನು" ಎಂದ.

ಅಸಲಿಗೆ ಆ ವೃದ್ಧನ ಮಗ ಸೈನ್ಯದಲ್ಲಿದ್ದ. ತಂದೆಯ ಅನಾರೋಗ್ಯದ ಸುದ್ದಿ ಹೋಗಿತ್ತು ಆತನಿಗೆ. ಯಾವ ಕ್ಷಣದಲ್ಲಾದರೂ ಬರುವ ಸಾಧ್ಯತೆ ಇತ್ತು. ಕಾರಿಡಾರ್‌ನಲ್ಲಿ ಕುಳಿತಿದ್ದವನನ್ನೇ ಆತನ ಮಗ ಅಂದುಕೊಂಡುಬಿಟ್ಟಳು ನರ್ಸ್. ಏನೋ ಅನಾನುಕೂಲದಿಂದಾಗಿ ಸೈನಿಕ ಆಸ್ಪತ್ರೆಗೆ ತಲುಪುವುದಕ್ಕಾಗಿರಲಿಲ್ಲ. ಅವನ ಸ್ಥಾನದಲ್ಲಿ ಇವನ್ಯಾರೋ ಅಪರಿಚಿತ ಕುಳಿತಿದ್ದ. ಆ ವೃದ್ಧ ಯಾರು ಅನ್ನುವುದು ಇವನಿಗೆ ಗೊತ್ತೇ ಇರಲಿಲ್ಲ. ಆತನಿಗೊಬ್ಬ ಮಗ ಇದ್ದಾನೆ, ಮಗನ ಅವಶ್ಯಕತೆ ಆತನಿಗೆ ತುಂಬ ಇದೆ, ಅದ್ಯಾಕೋ ಮಗ ಬಂದಿಲ್ಲ. ಆ ವೃದ್ಧ ತನ್ನನ್ನೇ ಮಗ ಅಂದುಕೊಂಡಿದ್ದಾನೆ ಅನ್ನೋದಷ್ಟೇ ಅರ್ಥ ಆದದ್ದು. ಸುಳ್‌ಸುಳ್ಳೇ ಆದರೂ ಒಂದು ಸಮಾಧಾನ ಕೊಟ್ಟಿದ್ದ ಯುವಕ. ಅದಕ್ಕೆ ಆ ವೃದ್ಧ ಮುಖದ ಮೇಲೆ ಮಂದಹಾಸ ಇಟ್ಟುಕೊಂಡು ಪ್ರಾಣಬಿಟ್ಟ. ಮಗ ಬಂದಿಲ್ಲ ಅನ್ನುವುದು ಗೊತ್ತಾಗಿದ್ದರೆ ಏನೇನು ಸಂಕಟಪಟ್ಟುಕೊಳ್ಳುತ್ತಿದ್ದನೋ ಏನೋ.

ಜನರಿಗೆ ಅನೇಕ ಸಂದರ್ಭಗಳಲ್ಲಿ ಇನ್ನೊಬ್ಬರ ಅವಶ್ಯಕತೆ ಬರುತ್ತೆ. ಬೇರೆ ಯಾವುದಕ್ಕಲ್ಲದಿದ್ದರೂ, ಸುಮ್ಮನೆ ಜೊತೆಗಿರುವುದಕ್ಕೆ, ಕೈ ಹಿಡಿದುಕೊಂಡಿರುವುದಕ್ಕೆ, ಕಣ್ಣೀರು ಒರೆಸುವುದಕ್ಕೆ, ಆಗ ಜೊತೆಗೆ ಇರುವುದರಿಂದ ಕಳೆದುಕೊಳ್ಳುವಂಥದ್ದೇನೂ ಇರುವುದಿಲ್ಲ. ಯಾರಿಗೆ ಗೊತ್ತು? ಅಂಥ ಅವಶ್ಯಕತೆ ನಮ್ಮವರಿಗೆ ಯಾವಾಗ ಬರತ್ತೋ...! ನಮಗೇ ಯಾವಾಗ ಬರತ್ತೋ...!


• ರೊ. ಎಂ. ಮಾಧವಾಚಾರ್


## ಜನ್ಮ ದಿನದ ಶುಭಾಶಯಗಳು



*Venkataramana Jois Y. V.*
*13th May*









### ಮುದ್ದುರಾಮನ ಚೌಪದಿ...

ಸೂರ್ಯ ಮುಳುಗಿದ ಈಗ, ಸಂಜೆಯಾಯಿತು ಬೇಗ
ಗೂಡ ಸೇರಿತು ಹಕ್ಕಿ ವಿಶ್ರಾಂತಿಗಾಗಿ,
ಯಂತ್ರವಾಗುತ ಮನುಜ ಎಲ್ಲ ಕಕ್ಕಾಬಿಕ್ಕಿ,
ಮೊರೆಯಿಡುವುದೆಲ್ಲೀಗ – ಮುದ್ದುರಾಮ.




To,

*Book Post*